






# ಬದಲಾದ ರಾಜಕಾರಣ ಸೂತ್ರ ಮುಕ್ಕಾದ ಬಹುತ್ವ ಭಾರತ ಮಂತ್ರ

ನರೇಂದ್ರ ಮೋದಿ ಅವರು ಒಂದು ವಿದ್ಯಮಾನ ಎಂಬುದು ಮತ್ತಷ್ಟು ಸ್ಫುಟಗೊಂಡ ವರ್ಷ 2019. ಮೂರು ದಶಕಗಳ ಬಳಿಕ ಒಂದು ಪಕ್ಷಕ್ಕೆ ಲೋಕಸಭೆಯಲ್ಲಿ ಸ್ಪಷ್ಟ ಬಹುಮತ ದೊರಕಿಸಿಕೊಟ್ಟ ಶ್ರೇಯಸ್ಸು ಅವರಿಗೆ 2014ರಲ್ಲೇ ಸಿಕ್ಕಿತ್ತು. ಅದನ್ನು 2019ರಲ್ಲಿ ಇನ್ನಷ್ಟು ಎತ್ತರಕ್ಕೆ ಒಯ್ದರು. ಇಷ್ಟೊಂದು ಜಾತಿಗಳು, ಸಮುದಾಯಗಳು, ಸಂಸ್ಕೃತಿಗಳು, ಪಕ್ಷಗಳು ಮತ್ತು ಪ್ರಾದೇಶಿಕ ಅಸ್ಮಿತೆಗಳು ಇರುವ ದೇಶದಲ್ಲಿ ಒಂದು ಪಕ್ಷಕ್ಕೆ ಬಹುಮತ ತಂದುಕೊಡುವುದು ಸಾಮಾನ್ಯ ಸಾಧನೆ ಅಲ್ಲ. ಆದರೆ, ಈ ಬಾರಿಯೂ ದೇಶಕ್ಕೆ ಅಧಿಕೃತ ವಿರೋಧಪಕ್ಷ ಇಲ್ಲದಂತೆ ಆಗಿರುವುದು ವಿವೇಕಿಗಳ ಪಾಲಿಗೆ ಕಳವಳಕಾರಿ.

ಬಿಜೆಪಿಯ ರಾಜಕೀಯ ಕಾರ್ಯಸೂಚಿಗಳನ್ನು ಅನುಷ್ಠಾನಕ್ಕೆ ತರಲು ಮೊದಲ ಅವಧಿಯಲ್ಲಿ ಭೂಮಿಕೆ ಸಿದ್ಧಪಡಿಸಿಕೊಂಡಿದ್ದ 'ಟೀಮ್ ಮೋದಿ', ತಾನು ಮಾಡಬೇಕು ಅಂದುಕೊಂಡಿದ್ದನ್ನು ಎರಡನೆಯ ಅವಧಿಯಲ್ಲಿ ಯಾವುದೇ ಅಳುಕಿಲ್ಲದೆ ಮಾಡುತ್ತಿದೆ. 'ಮೋದಿ 2.0' ಆರಂಭವಾದ ತಕ್ಷಣವೇ ಇದು ಗೊತ್ತಾಯಿತು. ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಏಕಾಏಕಿ ಹಿಂಪಡೆಯಲಾಯಿತು. ಏಕಕಾಲಕ್ಕೆ ಮೂರು ಬಾರಿ ತಲಾಖ್ ಎಂದು ಹೇಳಿ ಪತ್ನಿಗೆ ವಿಚ್ಛೇದನ ನೀಡುವುದನ್ನು ಶಿಕ್ಷಾರ್ಹಗೊಳಿಸುವ ಕಾನೂನನ್ನು ಜಾರಿಗೆ ತರಲಾಯಿತು. ರಾಷ್ಟ್ರೀಯ ಪೌರತ್ವ ನೋಂದಣಿಯನ್ನು (ಎನ್‌ಆರ್‌ಸಿ) ದೇಶದೆಲ್ಲೆಡೆ ಮಾಡಲು ಸರ್ಕಾರ ಸಜ್ಜಾಗುತ್ತಿದೆ. ಇದರ ನಡುವೆಯೇ, ಮೂರು ರಾಷ್ಟ್ರಗಳ ಮುಸ್ಲಿಮೇತರ ಅಕ್ರಮ ವಲಸಿಗರಿಗೆ ಭಾರತದ ಪೌರತ್ವ ನೀಡುವ, ಪೌರತ್ವ (ತಿದ್ದುಪಡಿ) ಮಸೂದೆಗೆ (ಸಿಎಬಿ) ಸಂಸತ್ತಿನ ಅನುಮೋದನೆ ಪಡೆದುಕೊಂಡಿದೆ. ರಾಷ್ಟ್ರಪತಿಯ ಒಪ್ಪಿಗೆಯೂ ಸಿಕ್ಕಿದೆ.

ಭಾರತದ ಬಲಪಂಥೀಯ ರಾಜಕಾರಣದ ಮೊದಲ ಮಜಲು 'ರಾಮ'. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣದ ಅಡೆತಡೆಗಳು ನಿವಾರಣೆಯಾಗಿವೆ. 'ರಾಮ' ಇನ್ನು ಮೊದಲಿನಷ್ಟು ರಾಜಕೀಯ ಮಹತ್ವ ಪಡೆದುಕೊಳ್ಳಲಿಕ್ಕಿಲ್ಲ. ಹಾಗಾಗಿ, ಬಲಪಂಥೀಯ ರಾಜಕಾರಣಕ್ಕೆ ಹೊಸ ವಿಷಯಗಳು ಬೇಕಾಗಿವೆ. ಮುಂದಿನ ರಾಜಕಾರಣದ ಗತಿಯನ್ನು ಸಿಎಬಿ ಮತ್ತು ಎನ್‌ಆರ್‌ಸಿಯಂತಹ ಅಸ್ತ್ರಗಳು ನಿರ್ದೇಶಿಸಬಹುದು.

ಮೋದಿ ಅವರ ವರ್ಚಸ್ಸು ಎತ್ತರೆತ್ತರಕ್ಕೆ ಬೆಳೆದಿದೆ. ಬಲಪಂಥೀಯ ರಾಜಕಾರಣದ ನೆಲೆ ದಶದಿಕ್ಕುಗಳಿಗೂ ವ್ಯಾಪಿಸುತ್ತಿದೆ. ಆದರೆ ಬಲಪಂಥೀಯ ರಾಜಕಾರಣದ ಪ್ರಮುಖ ಪಕ್ಷ ಬಿಜೆಪಿಯ ತೆಕ್ಕೆಯಲ್ಲಿ ಇದ್ದ ರಾಜ್ಯಗಳ ಸಂಖ್ಯೆ 2018ರ ನಂತರ ಕಡಿಮೆ ಆಗುತ್ತ ಸಾಗಿದೆ. ರಾಜಸ್ಥಾನ, ಮಧ್ಯಪ್ರದೇಶದಂತಹ ಹಿಂದಿ ನಾಡಿನ ಮುಖ್ಯ ರಾಜ್ಯಗಳು ಕಳೆದ ವರ್ಷದ ಕೊನೆಯಲ್ಲಿ ಬಿಜೆಪಿ ಕೈಯಿಂದ ಜಾರಿದವು. ಈ ವರ್ಷ ಕೂಡ, ಅತಿ ಮಹತ್ವದ ರಾಜ್ಯವಾದ ಮಹಾರಾಷ್ಟ್ರದ ಅಧಿಕಾರವು ಬಿಜೆಪಿಯ ಕೈಯಿಂದ ಜಾರಿತು.

ಅಷ್ಟೇ ಅಲ್ಲ, ಮೂರು ದಶಕಗಳ ಮಿತ್ರಪಕ್ಷ ಶಿವಸೇನಾ, ಬಿಜೆಪಿಯಿಂದ ದೂರವಾಗಿ ವಿರೋಧಿ ಪಾಳೆಯದ ಜೊತೆ ಸೇರಿ ಅಧಿಕಾರ ಹಿಡಿದಿದ್ದು ಗುರುತಿಸಬೇಕಾದ ಪರಿವರ್ತನೆ. ಹರಿಯಾಣ ರಾಜ್ಯದಲ್ಲಿ ಕೂಡ ಸ್ವತಂತ್ರವಾಗಿ ಅಧಿಕಾರ ಹಿಡಿಯಲು ಬೇಕಾದ ಸಂಖ್ಯಾಬಲ ಗಳಿಸಲಾರದೆ, ಪ್ರಾದೇಶಿಕ ಪಕ್ಷವೊಂದರ ನೆರವಿನಿಂದ ಅಧಿಕಾರ ಉಳಿಸಿಕೊಳ್ಳಬೇಕಾಯಿತು. ಮಹಾರಾಷ್ಟ್ರ ಮತ್ತು ಹರಿಯಾಣ ಕಂಡ ಪಲ್ಲಟಗಳು ಬಿಜೆಪಿ ಅನುಭವಿಸಿದ ಗುರುತರ ಹಿನ್ನಡೆ. ದೇಶದ ಕಾರ್ಪೊರೇಟ್ ಸಮುದಾಯ ಇಡಿಯಾಗಿ ಬಿಜೆಪಿ ಬೆನ್ನಿಗೆ ಇದೆ ಎಂಬ ನಂಬಿಕೆಗೆ ಹಲವಷ್ಟು ಆಧಾರಗಳು ಸಿಗುತ್ತವೆ. ಆದರೆ, ಕಾರ್ಪೊರೇಟ್ ರಾಜಧಾನಿ ಎಂಬಂತಿರುವ ಮುಂಬೈ (ಆ ಮೂಲಕ ಮಹಾರಾಷ್ಟ್ರ) ಬಿಜೆಪಿ ವಿರೋಧಿ ಪಾಳೆಯದ ಹಿಡಿತಕ್ಕೆ ಸಿಕ್ಕಿದ್ದನ್ನು, ಮುಂದಿನ ವರ್ಷಗಳಲ್ಲಿ ಕಾಣಬಹುದಾದ ಸ್ಥಿತ್ಯಂತರಗಳ ಸೂಚಕವಾಗಿ ಪರಿಗಣಿಸಬಹುದು.

ದೇಶದ ಕಾರ್ಪೊರೇಟ್ ವಲಯದ ದೇಣಿಗೆಯು ರಾಜಕೀಯ ವಲಯದಲ್ಲಿ ಅತಿಹೆಚ್ಚು ಬಂದಿರುವುದು ಬಿಜೆಪಿಗೆ ಎಂಬುದನ್ನು ಅಂಕಿ–ಅಂಶಗಳು ಹೇಳುತ್ತವೆ. ಕಾರ್ಪೊರೇಟ್ ವಲಯ ಮತ್ತು ಬಿಜೆಪಿ ನಡುವಿನ ಸಂಬಂಧ ಆತ್ಮಸಾಂಗತ್ಯ ಸ್ವರೂಪದ್ದು ಎಂಬ ಭಾವನೆಯೂ ಇದೆ. ಆದರೆ ಕಾರ್ಪೊರೇಟ್ ವಲಯದ ಪ್ರಮುಖರು ಬಿಜೆಪಿ ವಿರುದ್ಧ, ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ಮಾತನಾಡಿದ್ದು 2019ರ ಆಶ್ಚರ್ಯಕರ ಬೆಳವಣಿಗೆಗಳಲ್ಲಿ ಪ್ರಮುಖವಾದುದು.

ಮೋದಿ ಅವರಿಗೆ ರಾಷ್ಟ್ರ ಮಟ್ಟದಲ್ಲಿ ಪರ್ಯಾಯವೇ ಇಲ್ಲ ಎನ್ನುವ ಸಂದರ್ಭದಲ್ಲಿ, ರಾಜ್ಯಗಳ ಮಟ್ಟದಲ್ಲಿ ಪ್ರಾದೇಶಿಕ ಪಕ್ಷಗಳು ಮತ್ತು ಪ್ರಾದೇಶಿಕ ವರ್ಚಸ್ಸಿನ ಪ್ರಬಲ ನಾಯಕರು ಸಡ್ಡು ಹೊಡೆಯುತ್ತಿದ್ದಾರೆ. ತಂತ್ರಗಾರಿಕೆಯಲ್ಲಿ ಮೋದಿ–ಅಮಿತ್ ಶಾ ಎದುರು ನಿಲ್ಲುವವರು ಯಾರೂ ಇಲ್ಲ ಎನ್ನುವ ಸಂದರ್ಭದಲ್ಲೇ ಮಹಾರಾಷ್ಟ್ರದಲ್ಲಿ ಶರದ್ ಪವಾರ್ ಮಾಡಿದ ಮೋಡಿ, ಎಲ್ಲವೂ ಮುಗಿದಿಲ್ಲ ಎಂಬ ಭರವಸೆಯನ್ನು ವಿರೋಧ ಪಕ್ಷಗಳಿಗೆ ತಂದುಕೊಟ್ಟಿತು.

ಬಿಜೆಪಿಗೆ ವಿಂಧ್ಯ ಪರ್ವತದ ದಕ್ಷಿಣಕ್ಕೆ ಇರುವ ಏಕೈಕ ನೆಲೆ ಕರ್ನಾಟಕ ಮಾತ್ರ. ರಾಜ್ಯ ರಾಜಕಾರಣವು 2019ರಲ್ಲಿ ಹೇವರಿಕೆಯ ಮಟ್ಟಕ್ಕೆ ಇಳಿಯಿತು. ಕರ್ನಾಟಕದಲ್ಲಿ ಬಿಜೆಪಿ ಅಧಿಕಾರ ಹಿಡಿದು, ಅದನ್ನು ಭದ್ರಪಡಿಸಿಕೊಂಡಿದೆಯಾದರೂ ಅದಕ್ಕೆ ಅನುಸರಿಸಿದ ಮಾರ್ಗ, ಅದಕ್ಕೆ ಸಂಬಂಧಿಸಿದಂತೆ ನಡೆದ ಎಲ್ಲ ಪ್ರಹಸನಗಳು ಪ್ರಜಾತಂತ್ರ ವ್ಯವಸ್ಥೆಗೆ ಒಂದು ಕಪ್ಪುಚುಕ್ಕಿ.

ಈ ವರ್ಷ ದೇಶವನ್ನು ಆರ್ಥಿಕ ಹಿಂಜರಿತ ಬಲವಾಗಿ ಕಾಡುತ್ತಿದೆ. ಜನರ ಕೊಳ್ಳುವ ಶಕ್ತಿ ಕುಸಿದಿದೆ. ಉದ್ಯಮಗಳು ಹೂಡಿಕೆಗೆ ಮುಂದಾಗುವ ಸ್ಥಿತಿ ಇಲ್ಲ. ಆದರೆ ಇವ್ಯಾವುವೂ ಸಾರ್ವಜನಿಕ ಸಂವಾದದ ನಡುಮನೆಯಲ್ಲಿ ಇಲ್ಲ. ಜ್ವಲಂತ ಸಮಸ್ಯೆಗಳನ್ನೆಲ್ಲ ಗೌಣವಾಗಿಸಿ 'ಪಾಕಿಸ್ತಾನ'ವನ್ನೇ ಚರ್ಚೆಯ ಕೇಂದ್ರದಲ್ಲಿ ಇರಿಸಿಕೊಂಡಿರುವುದು ಆಳುವವರ ಜಾಣ್ಮೆಯೋ, ವಿರೋಧ ಪಕ್ಷಗಳ ದೌರ್ಬಲ್ಯವೋ, ಜನರ ಮಿತಿಯೋ ಅಥವಾ ಕಾಲಧರ್ಮದ ಮಹಿಮೆಯೋ..!